## ತಹಸೀಲ್ದಾರ್‌ರವರ ಕಾರ್ಯಾಲಯ ಹುಣಸೂರು ತಾಲೂಕು ಹುಣಸೂರು

ದೂರವಾಣಿ ಸಂಖ್ಯೆ-ಕಛೇರಿ/ಫ್ಯಾಕ್ಸ್ 0822-252040 PIN-571105 Email: tahhun@yahoo.com


ನಂ.ಎಲ್.ಎನ್.ಡಿ(ಕೆ):48/10-11 ದಿನಾಂಕ : 05-10-2010

### ಅಧಿಕೃತ ಜ್ಞಾಪನ

ವಿಷಯ: ಸರ್ಕಾರಿ ಹಾಗೂ ಸಾರ್ವಜನಿಕ ಜಮೀನುಗಳ ಕಂದಾಯ ಭೂಮಿಯನ್ನು ರಕ್ಷಿಸಲು ರಾಜ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರವನ್ನು ರಚಿಸುವ ಬಗ್ಗೆ.

ಉಲ್ಲೇಖ: ಜಿಲ್ಲಾಧಿಕಾರಿಗಳು, ಮೈಸೂರು ರವರ ಕಾರ್ಯಾಲಯದ ಪತ್ರ ಸಂ.ಎಲ್.ಎನ್.ಡಿ.(1)ಸಿಆರ್.11/10-11 ದಿನಾಂಕ:28-6-2010.

2. ಆಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರು ರವರ ಅ.ಸ.ಪತ್ರ.ಸಂ.ಸಿಟಿಎಫ್. 18/10-11 ದಿನಾಂಕ:21-6-10.
3. ಸರ್ಕಾರದ ಆದೇಶ ಸಂ.ಕಂಇ.82/ಎಲ್ಜಿಕ್ಯೂ-99(ಪಿ1)ದಿ:13-11-08.

*********

ಉಲ್ಲೇಖ(1)ರ ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ಇವರ ಪತ್ರದಲ್ಲಿ ಅಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣಾ ಪಾರ್ಚುಪಡೆ, ಬೆಂಗಳೂರು ಹಾಗೂ ಸರ್ಕಾರದ ಅಧೇಶವನ್ನು ಉಲ್ಲೇಖಿಸಿ ಅದರಂತೆ ಸರ್ಕಾರಿ ಹಾಗೂ ಸಾರ್ವಜನಿಕ ಜಮೀನುಗಳ ಕಂಧಾಯ ಭೂಮಿಯನ್ನು ರಕ್ಷಿಸಲು ರಾಝ್ಯ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳನ್ನು ರಚಿಸಲು ಪ್ರಸ್ತಾಪಿಸಿರುತ್ತಾರೆ.

ಈ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪ್ರಾಧಿಕಾರಗಳು ನಿಯತಕಾಲಿಕವಾಗಿ ಸಭೆ ಸೇರಿ ಆಗಿರುವ ಪ್ರಗತಿ ಬಗ್ಗೆ ಚ್ಛರ್ಚಿಸಿ ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷರು, ಸರ್ಕಾರಿ ಜಮೀನು ಸಂರಕ್ಷಣಾ ಕಾರ್ಯಪಡೆ, ಬೆಂಗಳೂರು ರವರಿಗೆ ಸಭೆ ನಡವಳಿ ಹಾಗೂ ಪ್ರಗತಿ ವರದಿಯನ್ನು ಸಲ್ಲಿಸಬೇಕಾಗಿದೆ. ಹಾಗೂ ತಹಸೀಲ್ದಾರರು ತಾಲ್ಲೂಕು ಮಟ್ಟದ ಪ್ರಾಧಿಕಾರದ ಸಭೆಯನ್ನು ಇನ್ನುಮುಂದೆ ನಿಯತಕಾಲಿಕವಾಗಿ ಸಭೆ ಕರೆದು ಸಭೆ ನಡೆಸಿ ನಿರ್ಣಯ ಹಾಗೂ ಪ್ರಗತಿ ವರದಿಯನ್ನು ನಿಯತಕಾಲಿಕವಾಗಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕಾಗಿದೆ.

ಅದುದರಿಂದ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನಲ್ಲಿ ತಾಲ್ಲೂಕು ಮಟ್ಟದ ಸರ್ಕಾರಿ ಜಮೀನು ಸಂರಕ್ಷಣಾ ಪ್ರಾದಿಕಾರವನ್ನು ಕೆಳಕಂಡಂತೆ ರಚಿಸಿ ಆದೇಶಿಸಿದೆ.

| | | |
|---|---|---|
| 1 | ತಹಸೀಲ್ದಾರರು | ಆಧ್ಯಕ್ಷರು |
| 2 | ಕಾರ್ಯ ನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ ಹುಣಸೂರು | ಸದಸ್ಯರು |
| 3 | ವೃತ್ತ ನಿರೀಕ್ಷಕರು ಹುಣಸೂರು | ಸದಸ್ಯರು |
| 4 | ವಲಯ ಅರಣ್ಯಾಧೀಕಾರಿಗಳು ಹುಣಸೂರು | ಸದಸ್ಯರು |
| 5 | ಸಹಾಯಕ ಕಾರ್ಯಪಾಲಕ ಅಭಿಯಂತರರು ಪಂಚಾಯತ್ ರಾಜ್ ತಾಂತ್ರಿಕ ಉಪವಿಭಾಗ ಹುಣಸೂರು | ಸದಸ್ಯರು |
| 6 | ಸಹಾಯಕ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಹುಣಸೂರು | ಸದಸ್ಯರು |
| 7 | ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾರಂಗಿ ಹುಣಸೂರು | ಸದಸ್ಯರು |
| 8 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ಮೈಸೂರು | ಸದಸ್ಯರು |
| 9 | ತಾಲ್ಲೂಕು ಆರೋಗ್ಯಾಧಿಕಾರಿಗಳು ಹುಣಸೂರು | ಸದಸ್ಯರು |
| 10 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುಣಸೂರು | ಸದಸ್ಯರು |
| 11 | ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಹುಣಸೂರು | ಸದಸ್ಯರು |
| 12 | ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಹುಣಸೂರು | ಸದಸ್ಯರು |
| 13 | ಸಹಾಯಕ ನಿರ್ದೇಶಕರು ತೋಟಗಾರಿಕೆ ಇಲಾಖೆ ಹುಣಸೂರು | ಸದಸ್ಯರು |
| 14 | ಸಹಾಯಕ ಕೃಷಿ ನಿರ್ದೇಶಕರು ಹುಣಸೂರು | ಸದಸ್ಯರು |
| 15 | ಸಹಾಯಕ ಕಾರ್ಯಪಾಲಕ ಅಭಿಯಂತರರು ಚೆಸ್ಕಾಂ ಹುಣಸೂರು | ಸದಸ್ಯರು |
| 16 | ಸಹಾಯಕ ನಿರ್ದೇಶಕರು ಪಶುಪಾಲನಾ ಇಲಾಖೆ ಹುಣಸೂರು | ಸದಸ್ಯರು |

ಪ್ರಾಧಿಕಾರದ ಈ ಕೆಳಕಂಡ ಅಂಶಗಳ ಕುರಿತು ಕಾರ್ಯ ನಿರ್ವಹಿಸತಕ್ಕದ್ದು.

1. ಸರ್ಕಾರಿ ಭೂಮಿಯ ಒತ್ತುವರಿಯನ್ನು ಪತ್ತೆಹಚ್ಚುವುದು
2. ಸರ್ಕಾರಿ ಭೂಮಿಯನ್ನು ಒತ್ತುವರಿಯಿಂದ ತೆರವುಗೊಳಿಸಿ ತ್ರೈಮಾಸಿಕ ವರದಿಯನ್ನು ಸಲ್ಲಿಸುವುದು
3. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 192(ಎ)ರ ಅಡಿಯಲ್ಲಿ ಅಪರಾಧ ಪ್ರಕರಣಗಳನ್ನು ದಾಖಲು ಮಾಡುವುದು.

ತಹಸೀಲ್ದಾರ್
ಹುಣಸೂರು ತಾಲ್ಲೂಕು
ಹುಣಸೂರು ತಾಲ್ಲೂಕ

ಪ್ರತಿಯನ್ನು
1. ಮಾನ್ಯ ಪ್ರಾದೇಶಿಕ ಆಯುಕ್ತರು ಮೈಸೂರು ವಿಭಾಗ ಮೈಸೂರು ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಉಪವಿಭಾಗಾಧಿಕಾರಿಗಳು ಹುಣಸೂರು ಉಪವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
4. ಸಂಬಂಧಪಟ್ಟ ಪ್ರಾಧಿಕಾರದ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.